1520(1605) ಶ್ರೀ ಸುನೀಲ್ ಕುಮಾರ್ ಎ.(ಕಾರ್ಕಳ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನಲ್ಲಿ ಬಡವರೆಂದು ಗುರ್ತಿಸಿ ಹಳದಿ ಪಡಿತರ ಚೀಟಿ ನೀಡಿ, ಸದರಿ ಕಾರ್ಡುಗಳನ್ನು ತಿಂಗಳೊಳಗೆ ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ರದ್ದತಿಗೆ ಕೈಗೊಂಡ ಮಾನದಂಡವೇನು:

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಇಲ್ಲ. ಹಸಿರು ಪಡಿತರ ಚೀಟಿಗಳನ್ನು ಹಿಂದಕ್ಕೆ ಪಡೆದು ತಾತ್ಕಾಲಿಕ ಗುರುತಿನ ಚೀಟಿಗಳನ್ನು ಕಾರ್ಕಳ ತಾಲ್ಲೂಕಿನಲ್ಲಿ ವಿತರಣೆ ಮಾಡಲಾಗಿತ್ತು. ಅನೇಕ ಅನರ್ಹರು ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವರೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಅನರ್ಹ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಜುಲೈ 2004ರ ಮಾಹೆಯಿಂದ ವಿಶೇಷ ಅಂದೋಲನ ಹಮ್ಮಿಕೊಳ್ಳಲಾಯಿತು. ಇದರನ್ವಯ ಜುಲೈ 2004 ರಿಂದ ಡಿಸೆಂಬರ್ 2004 ರವರೆಗೆ ಕಾರ್ಕಳ ತಾಲ್ಲೂಕಿನಲ್ಲಿ ಒಟ್ಟು 895 ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.

ಆ) ಅನರ್ಹ ಪಡಿತರ ಚೀಟಿಗಳ ರದ್ಧತಿಗೆ ಮಾನದಂಡಗಳು ಈ ಕೆಳಕಂಡಂತಿವೆ.

1) ಎರಡು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು.

2) ದೂರವಾಣಿ ಮತ್ತು ಸೆಲ್‌ಫೋನ್ ಹೊಂದಿರುವವರು

3) ಸ್ವಂತವಾಗಿ ಯಾರೇ ಡೀಸೆಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು;

4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;

5) ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು;

6) ತಿಂಗಳಿಗೆ ರೂ.1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು;

7) ಆದಾಯ ತೆರಿಗೆ ಪಾವತಿಸುವವರು;

8) Registered contractors, APMC Traders/Commission Agents/ Dealers in Seeds/Fertilizers etc.,

1521(1719) ಶ್ರೀ ಸುನೀಲ್ ಕುಮಾರ್ .ವಿ(ಕಾರ್ಕಳ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಅಸ್ತಿತ್ವಕ್ಕೆ ಬಂದು ಎಷ್ಟು ವರ್ಷಗಳಾದರೂ ಸಹ ಈ ಜಿಲ್ಲೆಗೆ ಪ್ರತ್ಯೇಕವಾದ ಡಿ.ಸಿ.ಸಿ ಬ್ಯಾಂಕ್ ಸ್ಥಾಪಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ಹಾಗೂ ಸ್ಥಾಪನೆಗೆ ಇರುವ ತೊಂದರೆಗಳೇನು?

ಇ) ಸದರಿ ಬ್ಯಾಂಕ್ ಸ್ಥಾಪನೆಯಾಗುವುದು ಯಾವಾಗ? ಮತ್ತು ಅದು ಈಗ ಸರ್ಕಾರದಲ್ಲಿ ಯಾವ ಹಂತದಲ್ಲಿದೆ?